**Sanction of Gavathana Sites to Rampur villagers for Construction of Village.**

*Q.*—1613. Sri B. T. MURNAL (Bagalkot).—

Will the Government be pleased to state :—

(*a*) whether it is a fact that the villagers of Rampur, Bagalkot Taluk have applied to sanction Gavathana Site for constructing a new village on account of great loss caused to the village due to the floods of Nala adjoining the village ;

(*b*) if so, when did they apply ;

(*c*) the time required to sanction the Gavathana Site to the villagers?

*A.*—Sri T. SUBRAMANYA (Minister for Law, Labour and Local Government).—

(*a*) Yes.

(*b*) On the 10th October 1956.

(*c*) The Acquisition proceedings will be taken up immediately after the cost of acquisition is credited by the villagers.

---

## SIXTH REPORT OF THE BUSINESS ADVISORY COMMITTEE.

Mr. SPEAKER.—I present the Sixth Report of the Buisiness Advisory Committee.

Sri L. H. THIMMABOVI (Deputy Speaker).—Sir, I move :

"That this Assembly agrees with the Sixth Report of the Business Advisory Committee."

Mr. SPEAKER.—Motion moved :

"That this Assembly agrees with the Sixth Report of the Business Advisory Committee."

*ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಅಧ್ಯಕ್ಷರೇ, ನಾನು ಕಮಿಟಿಯ ವರದಿಯ ಮೇಲೆ ಒಂದು ವಿಷಯ ಏನಂತಿಮಾಡಿಕೊಳ್ಳಬೇಕಾಗಿದೆ. ಈಗ ತಾವು ನಮ್ಮ ಮುಂದೆ Business Advisory Committee ಯವರ ವರದಿಯನ್ನು ಒಪ್ಪಿಗೆಗಾಗಿಟ್ಟಿದ್ದೀರಿ. ಹಾಲ ಈ ದಿವಸ ನಮ್ಮ ಮುಂದಿರುವ ಸಹಕಾರ ಸಂಸ್ಥೆಗಳ ಮನೂದೆ ಅತ್ಯಮೂಲ್ಯವಾದ ಮನೂದೆಯಾಗಿದೆ. ನಮ್ಮ ಸರ್ಕಾರದವರು ದೇಶದಲ್ಲಿ Co-operative Commonwealth ನ್ನು ಸ್ಥಾಪನೆಮಾಡಿ ಸೋಷಿಯಲ್ ಪ್ಯಾಟರ್ನ್‌ನ ಸಮಾಜದ ರಚನೆ ಮಾಡಬೇಕೆಂದು ಉದ್ದೇಶಪಟ್ಟಿದ್ದಾರೆ. ಅಂದರೆ ದೇಶದಲ್ಲಿ ಯಾವು ದೊಂದೂ ಸಹಕಾರ ತತ್ವದ ಮೇಲೆಯೇ ನಡೆಯತಕ್ಕ ದ್ದಾಗಿದೆ. ಹಾಗೂ ಆದರಿಂದ ಸಾಮಾನ್ಯ ಜನರ ಆರ್ಥಿಕಾಭಿವೃದ್ಧಿ ಸಾಧನೆಯಾಗಬೇಕು. ಅವರಿಗೆ ಸುಲಭರೀತಿಯಲ್ಲಿ ಸಾಲ ಸೋಲಗಳನ್ನು ಒದಗಿಸುವ ಏರ್ಪಾಡು ಮಾಡಿ ಬಡ ಜನರ ಉನ್ನತಿಯನ್ನು ಸಾಧನೆ ಮಾಡಬೇಕೆಂದಿದ್ದಾರೆ. ಇಂಥದಕ್ಕೆ ತಾವು ಮೂರೂವರೆ ಘಂಟೆಯ ಕಾಲ ಮಾತ್ರ ಕೊಟ್ಟಿದ್ದೀರಿ. ಜೊತೆಗೆ ಕಾಲದ ಮಿತಿ ಹಾಕಿ ಪ್ರತಿಯೊಬ್ಬ ಸದಸ್ಯರೂ ಸ್ವಲ್ಪ ಸ್ವಲ್ಪ ಮಾತನಾಡಿ ಮುಗಿಸ ಬೇಕೆಂದು ತಾವು ಹೇಳಿದ್ದೀರಿ. ಆದರೆ ಬಹುಮಂದಿ ಇನ್ನೂ ಈ ಮನೂದೆಯ ಮೇಲೆ ಮಾತನಾಡಬೇಕೆಂದಿ ದ್ದಾರೆ. ನಾವುಗಳೇನೋ ತಮ್ಮ ಸೂಚನೆಗೆ ಸಮ್ಮತಿ ಸಿದರೂ, ಚರ್ಚೆಮಾಡುವ ಕಾಲದಲ್ಲಿ ಆದಷ್ಟು ಮಟ್ಟಿಗೆ ತಮ್ಮ restriction ನ್ನು ಸಡಿಲಿಸಿ ಹೆಚ್ಚಿಗೆ ಮಾತ ನಾಡಲು ಎಲ್ಲರಿಗೂ ಒಂದು ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಇನ್ನೆಷ್ಟು ವರ್ಷಕ್ಕೋ ಇದು ಮತ್ತೊಮ್ಮೆ ತಿದ್ದುಪಡಿ ಯಾಗತಕ್ಕದ್ದು. ಅಲ್ಲದೆ, ಈ ಮನೂದೆಯಿಂದಾಗಿ ಉತ್ತಮ ರಾಜ್ಯವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಸರ್ಕಾರದವರು ದೇಶದ ಮುಂದೆ ಸಾರ್ವಜನಿಕರ ಮುಂದೆ ಸಾರುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಈ ಮನೂದೆಯ ಚರ್ಚೆಗಾಗಿ ಅರ್ಧ ಘಂಟೆ ಅಥವಾ ಒಂದು ಘಂಟೆ ಹೆಚ್ಚಿಗೆ ಅವಕಾಶ ಕೊಡುವುದರಿಂದ ಸರ್ಕಾರಕ್ಕೇನೂ ನಷ್ಟವಾಗರ್ಾದು. ಅದಕ್ಕೆ ಬದಲು ದೇಶಕ್ಕೆ ಎಷ್ಟೋ ಪ್ರಯೋಜನ ಲಭಿಸಿ ದಂತಾಗುತ್ತದೆ. ಒಂದೆರಡು ಘಂಟೆಗಳಿಂದಾಗಿ ದೇಶಕ್ಕೆ ಉಂಟಾಗುವ ಉಪಕಾರ ಅಪಾರವಾದುದು. ಮತ್ತೊಮ್ಮೆ ಈ ಬಿಲ್ಲು ಚರ್ಚೆಗೆ ಬರುತ್ತದೆಂದರೂ, ಆಗ್ಗೆ ಬಹಳ ತಿದ್ದುಪಡಿಗಳು ಬರಲು ಅವಕಾಶವಾಗಿ ಹೆಚ್ಚಿಗೆ ಕೆಲಸವಾಗುವುದಿಲ್ಲ. ಆದರಿಂದ ನಾಳೆ ಬರತಕ್ಕ ತಿದ್ದುಪಡಿಗಳನ್ನು ಕಡಮೆಮಾಡುವುದರ ದೃಷ್ಟಿಯಿಂದ ಲೂ, ಈ ಹೊತ್ತು ತಾವು ಮೂರುವರೆ ಘಂಟೆಗಳಿಗೆ ಬದಲಾಗಿ ಇನ್ನು ಸ್ವಲ್ಪ ಹೆಚ್ಚಿಗೆ ಕಾಲ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದವರನ್ನು ಕೇಳಿ ಕೊಳ್ಳುವುದಲ್ಲದೆ, ತಾವೂ ಕೂಡ ಸ್ವಲ್ಪ ಉದಾರತೆ ತೋರಿಸಿ ಸದಸ್ಯರಿಗೆ ಹೆಚ್ಚಿಗೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ದೊಡ್ಡ ದೊಡ್ಡ ದಾಗಿ ಎರಡನೆಯ ಪಾಂಚವಾರ್ಷಿಕ ಯೋಜನೆ, ಮೂರನೆಯ ಪಾಂಚವಾರ್ಷಿಕ ಯೋಜನೆಯ ವಿಷಯ ಈ ಸಭೆಯಲ್ಲಿ ಹೇಳುತ್ತಾ, ಕೋ-ಆಪರೇಷ್ಟ ಬೇಕೆನ್ನು ವುದನ್ನು ಕೇಳುತ್ತಿದ್ದೇವೆ. ಆದರೆ ವಾಸ್ತವವಾಗಿ Co-operation ಹೋಗಿ Non-Co-operation ಆಗಿದೆ. ಈ ದೃಷ್ಟಿಯಿಂದ ನನ್ನ ಪ್ರಾರ್ಥನೆಯನ್ನು ದೊಡ್ಡ ಮನಸ್ಸುಮಾಡಿ ಮನ್ನಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಹೇಳಿದ್ದು ಅರ್ಥವಾಯಿತು. ಆದರೆ, ಒಂದು ವಿಷಯ ತಮಗೆ ಹೇಳಬೇಕು. ಯಾವುದೇ ಮಾತಾಗಲಿ, ಒಮ್ಮೆ ಹೇಳಿದ್ದನ್ನು ಮತ್ತೊಮ್ಮೆ ಹೇಳದೆ ತೀವ್ರವಾಗಿ ಮಾತನಾಡಿ ಮುಗಿಸುವುದನ್ನೂ ತಾವುಗಳು ತಿಳಿದುಕೊಳ್ಳಬೇಕು.

ತಾವು ನಾನು ದೊಡ್ಡ ಮನಸ್ಸು ಮಾಡಬೇಕೆಂದು ಹೇಳಿದಿರಿ. ನನ್ನ ಮನಸ್ಸು ಯಾವುದರಲ್ಲೂ ದೊಡ್ಡದೇ ಇದೆ. ಆದರೆ ನಡೆವಳಿಕೆ, ನಿಯಮ ನೀತಿಗಳೆಂಬವು ಇವೆ. ಆದ್ದರಿಂದ ನಾನೇನೂ ಮಾಡುವುದಕ್ಕಾಗುವುದಿಲ್ಲ. Business Advisory Committee ಯವರು ಏನು ಮಾಡಿದ್ದಾರೆಯೋ ಅದು ಈ ಸಭೆಗೆ Recom-